**ದಿನಾಂಕಃ 20.11.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 2ನೇ ಎದುದಾರರ ಪರ ಮಾನ್ಯ ವಕೀಲರಿಂದ.**

ನನ್ನ ಗಂಡ ಮೊದಲಿಗೆ ಪರಿಹಾರದ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ಅಪಘಾತ ಸುಮಾರು ಒಂದೂವರೆ ವರ್ಷದ ಪೂರ್ವದಲ್ಲಿ ಆಗಿದ್ದು, ನಿಖರವಾದ ದಿನಾಂಕ ನೆನಪಿಲ್ಲ. ನನ್ನ ಗಂಡ ಮನೆಯಲ್ಲಿಯೇ ದಿನಾಂಕ 06.03.2024ರಂದು ಕಾಲು ನೋವಿನಿಂದ ಮೃತಪಟ್ಟಿರುತ್ತಾರೆ. ಅಪಘಾತವಾದ ನಂತರ ನನ್ನ ಗಂಡ ಕೆಲಸಕ್ಕೆ ಹೋಗುತ್ತಿರಲಿಲ್ಲ.

ಅಪಘಾತವಾದ ನಂತರ ನನ್ನ ಗಂಡನನ್ನು ಸಪ್ತಗಿರಿ ಆಸ್ಪತ್ರೆಗೆ ದಾಖಲಿಸಿರುತ್ತೇವೆ. ಸದರಿ ಆಸ್ಪತ್ರೆಯಲ್ಲಿ ನನ್ನ ಗಂಡ ಒಂದು ದಿನ ದಾಖಲಾಗಿದ್ದರು. ನಂತರ ವಿಕ್ಟೋರಿಯಾ ಆಸ್ಪತ್ರೆಗೆ ಹೋಗಿದ್ದು, ಅಲ್ಲಿ 30-35 ದಿನಗಳ ಕಾಲ ದಾಖಲಾಗಿದ್ದರು. ನನ್ನ ಗಂಡನಿಗೆ ಕಾಲು ಮೂಳೆ ಮುರಿದಿದ್ದು, ಬಲ ಪಕ್ಕೆಗೆ ಮತ್ತು ಮುಖದ ಬಲಭಾಗಕ್ಕೆ ಪೆಟ್ಟುಗಳು ಆಗಿದ್ದವು. ನಿಪಿ 5 ರ ಪ್ರಕಾರ ನನ್ನ ಗಂಡ ಆಸ್ಪತ್ರೆಯಿಂದ ದಿನಾಂಕ 29.04.2023ರಂದು ಬಿಡುಗಡೆಯಾಗಿರುತ್ತಾರೆ ಎಂದರೆ ಸರಿ. ನನ್ನ ಗಂಡನಿಗೆ ಸಾಮಾನ್ಯ ಸ್ವರೂಪದ ಗಾಯಗಳು ಆದ ಬಗ್ಗೆ ಅಂತಿಮ ವರದಿಯಲ್ಲಿ ನಮೂದು ಇರುತ್ತದೆ ಎಂದರೆ ಸರಿಯಲ್ಲ. ಆಸ್ಪತ್ರೆಯಿಂದ ಬಿಡುಗಡೆಯಾದ ನಂತರ ಮೃತಪಡುವವರೆಗೂ ಪುನಃ ನನ್ನ ಗಂಡ ಚಿಕಿತ್ಸೆ ಪಡೆದ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ಅಪಘಾತದಿಂದುಂಟಾದ ಗಾಯಗಳಿಂದ ಮೃತಪಟ್ಟರು ಎಂದು ಪೊಲೀಸರಿಗೆ ಮಾಹಿತಿ ನೀಡಿಲ್ಲ ಎಂದರೆ ಸರಿಯಲ್ಲ. ಪೊಲೀಸರು ಮರಣೋತ್ತರ ಪರೀಕ್ಷೆಯನ್ನು ಮಾಡಿಲ್ಲ. ಪೊಲೀಸರು ನನ್ನ ಗಂಡನ ಮರಣದ ನಂತರ ಮರು ಅಂತಿಮ ವರದಿಯನ್ನು ಸಲ್ಲಿಸಿಲ್ಲ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ.

ಅಪಘಾತವಾದ ದಿನಾಂಕದಂದು ನನ್ನ ಗಂಡ ಮದ್ಯಸೇವನೆ ಮಾಡಿ ರಸ್ತೆ ದಾಟುತ್ತಿದ್ದರು ಎಂದರೆ ಸರಿಯಲ್ಲ. ನನ್ನ ಗಂಡನಿಗೆ ತೀವ್ರ ಸ್ವರೂಪದ ಗಾಯಗಳು ಆದ ಕಾರಣ ಒಂದು ದಿನ ತಡವಾಗಿ ದೂರು

ನೀಡಿರುತ್ತೇವೆ. ನನ್ನ ಗಂಡ ಅಪಘಾತದ ಕಾರಣದಿಂದ ಮೃತಪಟ್ಟಿಲ್ಲ ಹಾಗೂ ವಯೋಸಹಜವಾಗಿ ಮೃತಪಟ್ಟಿರುತ್ತಾರೆ ಎಂದರೆ ಸರಿಯಲ್ಲ. ಅಪಘಾತವಾದಾಗ ನನ್ನ ಗಂಡನಿಗೆ 53 ವರ್ಷ ವಯಸ್ಸು ಆಗಿತ್ತು. ನನ್ನ ಗಂಡ 1962ರಲ್ಲಿ ಜನಿಸಿರುವ ಬಗ್ಗೆ ನಿಪಿ 13 ರಲ್ಲಿ ನಮೂದು ಇದೆ ಎಂದರೆ ಸರಿ. ನನ್ನ ಮಗಳು 1992 ರಲ್ಲಿ ಜನಿಸಿರುತ್ತಾರೆ. ನನ್ನ ಅಳಿಯ ಮೃತಪಟ್ಟಿದ್ದು, ನನ್ನ ಮಗಳು ಇಬ್ಬರು ಮಕ್ಕಳೊಂದಿಗೆ ಮೈಸೂರಿನಲ್ಲಿ ವಾಸವಾಗಿದ್ದಾರೆ. ನನ್ನ ಮಗಳು ತೋಟದ ಕೆಲಸ ಮಾಡುತ್ತಾಳೆ. ನನ್ನ ಅಳಿಯನ ಮರಣದ ವಿಚಾರದ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಿಲ್ಲ.

ನನ್ನ ಗಂಡನ ಕೆಲಸ ಮತ್ತು ಸಂಬಳದ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ನನ್ನ ಗಂಡನ ಅಂತ್ಯಸಂಸ್ಕಾರ ಮತ್ತು ಇತರೆ ಖರ್ಚುಗಳಿಗೆ ನಾನು ಹೇಳಿರುವಷ್ಟು ಹಣವನ್ನು ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ. ನನಗೆ ಒಬ್ಬ ಮಗ ಇದ್ದು, ಇಬ್ಬರು ಹೆಣ್ಣು ಮಕ್ಕಳು ಇರುತ್ತಾರೆ. ನನ್ನ ಹೆಣ್ಣು ಮಕ್ಕಳಿಗೆ ಮದುವೆಯಾಗಿದ್ದು, ಮಗ ಯಾವುದೇ ಕೆಲಸ ಮಾಡುತ್ತಿಲ್ಲ. ಪರಿಹಾರ ಪಾವತಿಸಲು 2ನೇ ಎದುರುದಾರರು ಬಾಧಸ್ಥರಲ್ಲ ಎಂದರೆ ಸರಿಯಲ್ಲ. ಅಪಘಾತಕ್ಕೂ, ನನ್ನ ಗಂಡನ ಸಾವಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ಮದ್ಯಸೇವನೆ ಮಾಡಿ ರಸ್ತೆ ದಾಟುತ್ತಿದ್ದ ಪರಿಣಾಮ ಬಿದ್ದು ಗಾಯಮಾಡಿಕೊಂಡಿದ್ದು, ಅಪಘಾತದಿಂದ ಅಲ್ಲ ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**1ನೇ ಎಸ್‌ಸಿಜೆ ಮತ್ತು ಎಸಿಜೆಎಮ್**

**ಬೆಂಗಳೂರು**